2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 185/2022</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಲತ | ಪಿಡಬ್ಲೂ - 01 |
| ತಂದೆಯ ಹೆಸರು | - | ಗಿರೀಶ | ಸಿಡಬ್ಲೂ - 01 |
| ವಯಸ್ಸು | - | 45 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಆಗಳ ಗ್ರಾಮ | |

ದಿನಾಂಕಃ **19.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದ ಮುಂದಿರುವ ಆರೋಪಿತರು ನನ್ನ ಸಂಬಂಧಿಕರು. ಚಾಸಾ.2 ನನ್ನ ತಾಯಿ. ಚಾಸಾ.3 ನನ್ನ ತಂಗಿ. ನನಗೆ ಚಾಸಾ.4 ರಿಂದ 6 ರವರ ಪರಿಚಯ ಇದೆ.

2. ನಮ್ಮ ಕುಟುಂಬ ಮತ್ತು ಆರೋಪಿತರ ಕುಟುಂಬ ಆಗಳ ಗ್ರಾಮ, ಹಂಗರವಳ್ಳಿ ಅಂಚೆ ಇಲ್ಲಿ ಅಕ್ಕಪಕ್ಕದಲ್ಲಿ ವಾಸವಿರುತ್ತೇವೆ. ನಮ್ಮ ತೋಟಗಳು ಸಹ ಅಕ್ಕಪಕ್ಕದಲ್ಲಿರುತ್ತವೆ. ನಮ್ಮ ಹಾಗೂ ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ಆರೋಪಿತರು ನಮ್ಮ ತೋಟಕ್ಕೆ ಅತಿಕ್ರಮ ಪ್ರವೇಶ ಮಾಡಿ, ನನಗೆ, ಚಾಸಾ.2 ಮತ್ತು 3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕತ್ತಿ ಮತ್ತು ಆಯುಧಗಳಿಂದ ಹಲ್ಲೆ ಮಾಡಿ ನಮ್ಮ ಬಟ್ಟೆಗಳನ್ನು ಹರಿದು ನಮ್ಮ ಮಾನಕ್ಕೆ ಧಕ್ಕೆ ಉಂಟು ಮಾಡಿರುವುದಿಲ್ಲ.

3. ನಾನು ಹಾಗೂ ಚಾಸಾ.2 ಮತ್ತು 3 ರವರು ಜಮೀನಿನ ವಿಚಾರವಾಗಿ ಆಲ್ದೂರು ಪೊಲೀಸ್ ಠಾಣೆಗೆ ಹೋಗಿದ್ದಾಗ ನಾನು ಈಗ ನೋಡುತ್ತಿರುವ ದಾಖಲೆಗೆ ಪೋಲೀಸರು ನನ್ನ ಸಹಿ ಪಡೆದುಕೊಂಡಿದ್ದರು. ಸದರಿ ದಾಖಲೆಯು ದೂರಾಗಿದ್ದು ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು

ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ.1 ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿರುವುದಿಲ್ಲ.

4. ದಿಃ 07.05.2020 ರಂದು ಪೋಲೀಸರು ಜರುಗಿಸಿರುವ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು ಸದರಿ ಮಹಜರನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಒಂದು ಪೋಟೋದಲ್ಲಿ ನಾನು ಇದ್ದೇನೆ. ಸಾಕ್ಷಿ ಗುರುತಿಸಿದ ಪೋಟೋವನ್ನು ನಿಪಿ.3 ಎಂದು ಗುರುತಿಸಲಾಯಿತು. ನಿಪಿ.2 ಕ್ಕೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ.3 ಕ್ಕೆ ನಾನು ಪೋಲೀಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದೇನೆ. ನಿಪಿ.3 ರ ಪೋಟೋವನ್ನು ಪೋಲೀಸರು ನಮ್ಮ ಜಮೀನಿನ ವಿಚಾರಕ್ಕೆ ತೆಗೆದುಕೊಂಡಿದ್ದರು. ನಾನು ಪೋಲೀಸರಿಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಮುಂದುವರೆದ ಹೇಳಿಕೆ ನೀಡಿಲ್ಲ.

5. ದಿಃ 25.09.2020 ರಂದು ಮಾನ್ಯ ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಚಿಕ್ಕಮಗಳೂರು ಇವರ ಸಮಕ್ಷಮ ನಾನು ನಮ್ಮ ಜಮೀನಿನ ವಿಚಾರವಾಗಿ ಹೇಳಿಕೆ ನೀಡಿದ್ದೇನೆ. ಸದರಿ ಹೇಳಿಕೆಯಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಹೇಳಿಕೆಯನ್ನು ನಿಪಿ.4 ಎಂದು ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ನಾನು ಆರೋಪಿತರ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ ಮತ್ತು ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು: ಸರ್ಕಾರಿ ಅಭಿಯೋಜಕರಿಂದ:-</u>

6. ದಿ: 23.03.2020 ರಂದು ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಚಿಕ್ಕಮಗಳೂರು ಮಲ್ಲೇ ಗೌಡ ಆಸ್ಪತ್ರೆಯಲ್ಲಿ ಆಲ್ದೂರು ಪೋಲೀಸರು ನನ್ನ ವಿಚಾರಣೆಗೆ ಬಂದಾಗ ನಾನು ಆಸ್ಪತ್ರೆಯಲ್ಲಿ ನಿಪಿ.1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದೂರಿನಲ್ಲಿ ನಾನು ಆರೋಪಿತರ ವಿರುದ್ಧ, ದಿ: 23.03.2020 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ನಮ್ಮ ಕಾಫಿತೋಟಕ್ಕೆ ನಾನು, ನನ್ನ ತಾಯಿ ಹಾಗೂ ಮೆಣಸು ಕುಯ್ಯಲು ಕೂಲಿ ಕಾರ್ಮಿಕರನ್ನು ಕರೆದುಕೊಂಡು ಹೋಗಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಬೆಳಿಗ್ಗೆ 10.30 ಗಂಟೆಗೆ ಪ್ರಕರಣದ ಆರೋಪಿತರು ನಮ್ಮ ಕಾಫಿ ತೋಟಕ್ಕೆ ಅತಿಕ್ರಮ ಪ್ರವೇಶ ಮಾಡಿ ನಮ್ಮ ಕಾಫಿ ಗಿಡಗಳನ್ನು ಕತ್ತಿಯಿಂದ ಕಡಿದು ಹಾಳು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಇದನ್ನು ನೋಡಿದ ನಾನು ಹಾಗೂ ಚಾಸಾ.2 ಸೇರಿ ಆರೋಪಿತರನ್ನು ಪ್ರಶ್ನಿಸಿದಾಗ ಆರೋಪಿತರು ನಮಗೆ ಸೂಳೆ ಮುಂಡೇ ಎಂದು ಅವಾಚ್ಯವಾಗಿ ಬೈದು ಈ ದಿನ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ ಎಂದು ಹಾಗೂ ಗತಿ ಕಾಣಿಸುತ್ತೇವೆ ಎಂದು ನುಡಿಯುತ್ತಾ, ಏಕಾಏಕಿ ಕತ್ತಿಯಿಂದ ಕಡಿಯಲು ಬಂದಾಗ ನಾನು ನನ್ನ ಕೈ ಅಡ್ಡಕೊಟ್ಟಿದ್ದು ಸದರಿ ಕತ್ತಿ ಪೆಟ್ಟು ನನ್ನ ಎಡದೇ ಕೈ ಹಸ್ತಕ್ಕೆ ಬಲವಾಗಿ ಬಿದ್ದು ರಕ್ತಗಾಯ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನನ್ನು ಬಿಡಿಸಲು ಬಂದ ಚಾಸಾ.2 ರವರಿಗೂ ಸಹ 1 ನೇ ಆರೋಪಿ ಮಹೇಶನು ತನ್ನ ಬಳಿ ಇದ್ದ ಕತ್ತಿಯಿಂದ ಚಾಸಾ.2 ರವರ ಕೈಗೆ ಮತ್ತು ಎಡಗಾಲಿಗೆ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿಯಲ್ಲ.

7. ಅಷ್ಟರಲ್ಲಿ 2 ನೇ ಆರೋಪಿ 1 ನೇ ಆರೋಪಿಯ ಕೈಯಿಂದ ಕತ್ತಿಯನ್ನು ಕಿತ್ತುಕೊಂಡು ಚಾಸಾ.2 ರವರ ತಲೆಗೆ ಕಡಿದು ರಕ್ತಗಾಯ

ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗಲಾಟೆಯನ್ನು ನೋಡಿ ಚಾಸಾ.3 ರವರು ಜಗಳ ಬಿಡಿಸಲು ಬಂದಾಗ 2 ನೇ ಆರೋಪಿ ಚಾಸಾ.3 ರವರ ಎದೆಯನ್ನು ಹಿಡಿದು ತಳ್ಳಿ ಕೆಳಗೆ ಬೀಳಿಸಿ ಕಾಲಿನಿಂದ ಹೊಟ್ಟೆಗೆ ಒದ್ದು ಕೆಳಗೆ ಬೀಳಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ 2 ನೇ ಆರೋಪಿತನು ತನ್ನ ಆಟೋದಿಂದ ಒಂದು ರಾಡನ್ನು ತೆಗೆದುಕೊಂಡು ಚಾಸಾ.3 ರವರಿಗೆ ಹಲ್ಲೆ ಮಾಡಿ ರಕ್ತಗಾಯ ಮಾಡಿ ಮತ್ತು ಅದೇ ರಾಡಿನಿಂದ ಮೈಕೈಗೆ ಹೊಡೆದು ನೋವುಂಟುಮಾಡಿರುತ್ತಾನೆ ಎಂದರೆ ಸರಿಯಲ್ಲ. ಅದೇ ವೇಳೆಗೆ 2 ನೇ ಆರೋಪಿ ತನ್ನ ಹೆಂಡತಿಯಾದ 3 ನೇ ಆರೋಪಿತಳ ಕೈಯಲ್ಲಿದ್ದ ಕತ್ತಿಯಿಂದ ನನ್ನ ಬಲಗೈಗೆ ಹೊಡೆದು ರಕ್ತಗಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ 4 ನೇ ಆರೋಪಿತಳು ನನಗೆ ಕೈಗಳಿಂದ ಹೊಡೆದು ನನ್ನ ಎಡಗೈ ತೋಳಿಗೆ ಹಲ್ಲಿನಿಂದ ಕಚ್ಚಿ ರಕ್ತಗಾಯ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ನಂತರ ಎಲ್ಲಾ ಆರೋಪಿತರು ಸೇರಿ ನಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ ಅಲ್ಲಿಂದ ಹೊರಟುಹೋಗಿರುತ್ತಾರೆ ಎಂದರೆ ಸರಿಯಲ್ಲ.

8. ನಂತರ ನಾವು ನಮ್ಮ ತೋಟದಿಂದ ರಸ್ತೆಗೆ ಬಂದು ಒಂದು ಆಟೋದಲ್ಲಿ ಆಲ್ದೂರು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ನಂತರ ಅಲ್ಲಿನ ವೈದ್ಯರ ಸಲಹೆ ಮೇರೆಗೆ ಚಿಕ್ಕಮಗಳೂರು ಮಲ್ಲೇಗೌಡ ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯಲು ಒಳರೋಗಿಯಾಗಿ ದಾಖಲಾಗಿರುತ್ತೇವೆ ಎಂದರೆ ಸರಿಯಲ್ಲ. ನಾನು ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿರುವ ಸಂದರ್ಭದಲ್ಲಿ ಆಲ್ದೂರು ಪೋಲೀಸರು ವಿಚಾರಗೆ ಬಂದಾಗ ಈಗ ಓದಿ ಹೇಳಿದ ನಿಪಿ.1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

9. ನಂತರ ದಿಃ 07.05.2020 ರಂದು ಪೋಲೀಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಚನಾಮೆ ಜರುಗಿಸಲು ಕೃತ್ಯ ಸ್ಥಳವಾದ ನಮ್ಮ ತೋಟಕ್ಕೆ ಬಂದಾಗ ನಾನೇ ಅವರಿಗೆ ಕೃತ್ಯ ಸ್ಥಳವನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಹಾಗೂ ಆ ಸಮಯದಲ್ಲಿ ಹಾಜರಿದ್ದ ಚಾಸಾ.5 ಮತ್ತು 6 ರವರ ಸಮಕ್ಷಮ ಪೋಲೀಸರು ಮಹಜರು ಜರುಗಿಸುವಾಗ ಆರೋಪಿತರು ಕೃತ್ಯ ಸ್ಥಳದಲ್ಲಿ ಬಿಟ್ಟು ಹೋದ ಕತ್ತಿ ಹಾಗೂ ರಾಡನ್ನು ಮತ್ತು ಹಲ್ಲೆಯಿಂದ ರಕ್ತವಾದ ನನ್ನ, ಚಾಸಾ.2 ಮತ್ತು 3 ರವರ ರಕ್ತಸಿಕ್ತ ಬಟ್ಟೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೋಲೀಸರು ಮದ್ಯಾಹ್ನ 12.10 ರಿಂದ 1.10 ರವರೆಗೆ ಕೃತ್ಯ ಸ್ಥಳದಲ್ಲಿ ನಿಪಿ.2 ರಂತೆ ಮಹಜರು ಕ್ರಮ ಜರುಗಿಸಿ ಎಲ್ಲಾ ಮುದ್ದೆಮಾಲುಗಳನ್ನು ಅಮಾನತುಪಡಿಸಿಕೊಂಡು ನಿಪಿ.3 ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

10. ನಂತರ ದಿಃ 25.09.2020 ರಂದು ನ್ಯಾಯಾಧೀಶರ ಮುಂದು ನಿಪಿ.4 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

11. ನಂತರ ದಿಃ 20.08.2021 ರಂದು ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೃತ್ಯ ಸ್ಥಳದ ಸರ್ವೆ ನಂಬರನ್ನು ನಮೂದಿಸಿ ಈಗ ಓದಿ ಹೇಳಿದ ನಿಪಿ.5 ರಂತೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

12. ನಾವು ಮತ್ತು ಆರೋಪಿತರು ಈಗ ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ

(ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ)

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ